## ಮನಗೆದ್ದ ಮನೆದೇವ್ರು

ಕಲರ್ಸ್ ಕನ್ನಡದಲ್ಲಿ ಬರುತ್ತಿರುವ 'ಮನೆದೇವ್ರು' ಧಾರಾವಾಹಿ ಬೇರೆಲ್ಲಾ ಧಾರಾವಾಹಿಗಳಿಗಿಂತ ಉತ್ತಮವಾಗಿ ಮೂಡಿಬರುತ್ತಿದೆ. ಒಳ್ಳೆಯ ಕಥೆ, ಚಿತ್ರಕಥೆ ಹೊಂದಿರುವ ಧಾರಾವಾಹಿ ಚಕಚಕನೆ ಮುಂದಕ್ಕೆ ಹೋಗುತ್ತಾ ಇದೆ. ಯಾವುದೇ ಎಳೆತವಿಲ್ಲದೆ, ಕುತೂಹಲಕಾರಿಯಾಗಿ ಬರುತ್ತಿದೆ. ಎಲ್ಲರ ನಟನೆ ಶ್ಲಾಘನೀಯ. ಆದರೆ ಕೊರವಂಜಿಯ ಸನ್ನಿವೇಶ ಸ್ವಲ್ಪ ಅತಿರೇಕವಾಗಿದೆ. ಅದನ್ನೂ ಸಂದರ್ಭಕ್ಕೆ ಅನುಗುಣವಾಗಿ, ಮೂಢನಂಬಿಕೆಯನ್ನು ವೈಭವೀಕರಿಸದೆ, ಕಥೆಯನ್ನು ಮುಂದುವರಿಸಿದರೆ ಇನ್ನೂ ಚೆನ್ನಾಗಿರುತ್ತದೆ.

ಗೌರಿ, ಚಾಮರಾಜನಗರ

## ಭೂತ ಯುಗ

ಝೀ ಟಿವಿಯಲ್ಲಿ ಅಂಜಲಿ ಎನ್ನುವ ಹೊಸ ಧಾರಾವಾಹಿ ಆರಂಭವಾಗಲಿದೆ. ಈ ಧಾರಾವಾಹಿಯ ಟ್ರೈಲರ್ ನೋಡಿದರೆ ದೆವ್ವದ ಯುಗ ನಮ್ಮ ವಾಹಿನಿಗಳಲ್ಲಿ ಅವ್ಯಾಹತವಾಗಿ ಮುಂದುವರಿಯುತ್ತಿರುವ ಸೂಚನೆ ಸಿಗುತ್ತಿದೆ. ಈಗಾಗಲೇ ಕಲರ್ಸ್ ಕನ್ನಡದ 'ಲಕ್ಷ್ಮೀಬಾರಮ್ಮ'ದಲ್ಲಿ ಮಗುವಿನ ಪಾತ್ರದ ದೆವ್ವದ ಹಾವಳಿ ಶುರುವಾಗಿರುವಾಗ ಈಗ ಝೀ ಟಿವಿಯಲ್ಲಿಯೂ ಮಗುವಿನ ದೆವ್ವದ ಸುತ್ತ ನಡೆವ ವಿದ್ಯಮಾನಗಳ ಧಾರಾವಾಹಿ ಪ್ರಾರಂಭವಾಗುತ್ತಿರುವುದು ಏಕೋ ಸರಿಕಾಣುತ್ತಿಲ್ಲ.

ಈಗಾಗಲೇ ವಾಹಿನಿಗಳಲ್ಲಿ ಬೆಳಗಿನ ವೇಳೆ ಜ್ಯೋತಿಷ, ಗ್ರಹಚಾರ, ಪೂಜೆ ಪುನಸ್ಕಾರ ಎಂದು ಮೌಢ್ಯದ ನೇರ ಪ್ರಸಾರ ನಡೆಯುತ್ತಿದೆ. ಅವೇ ವಾಹಿನಿಗಳಲ್ಲಿ ಧಾರಾವಾಹಿಗಳನ್ನು ಮುಂದುವರೆಸುವ ನೆಪದಲ್ಲಿ ದೆವ್ವದ ಪಾತ್ರವನ್ನು ಸೃಷ್ಟಿಸಿ ಸಂಜೆ ಕೂಡಾ ಮೌಢ್ಯದ ಪ್ರಚಾರ ನಡೆಯುತ್ತಿದೆ. ಇದು ವಿಶೇಷವಾಗಿ ಮಕ್ಕಳಲ್ಲಿ ಹೆದರಿಕೆ ತರಿಸುತ್ತಿದೆ. ಮೂರ್ಖರ ಪೆಟ್ಟಿಗೆಯಿಂದ ಜಾಣರ ಪೆಟ್ಟಿಗೆಯಾದ ಟಿವಿ ಕೆಲವು ಧಾರಾವಾಹಿಗಳ ಮೂಲಕ ಭಯದ ಪೆಟ್ಟಿಗೆಯಾಗುತ್ತಿರುವುದು ಏಕೋ ನಮಗೆ ಸರಿಕಾಣಿಸುತ್ತಿಲ್ಲ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

**ವಾರದ ಪತ್ರ**

## ಅವೇ ಚಲನಚಿತ್ರಗಳು

ಸುಮಾರು ಮೂರು ನಾಲ್ಕು ತಿಂಗಳಿಂದ ಚಂದನ ವಾಹಿನಿಯವರು ವೀಕ್ಷಕರ ತಾಳ್ಮೆಯನ್ನು ಪರೀಕ್ಷಿಸುತ್ತಿದ್ದಾರೆ. ಮಂಗಳವಾರ, ಗುರುವಾರ 12ಗಂಟೆಗೆ, ಶನಿವಾರ ಹಾಗೂ ಭಾನುವಾರ ಮಧ್ಯಾಹ್ನ 4 ಗಂಟೆಗೆ ಹಾಗೂ ದಿನಾಲೂ ಮಧ್ಯಾಹ್ನ 3.30 ನಿಮಿಷಕ್ಕೆ ಬರುವ ಬಯೋಸ್ಕೋಪ್ ನಲ್ಲೂ ಈ ಕೆಳಕಂಡ ಸಿನಿಮಾಗಳನ್ನೇ ಹಾಕಿ ಹಾಕಿ ಬೋರ್ ಹೊಡೆಸುತ್ತಿದ್ದಾರೆ. 'ದಾಟು, ಕನಸೆಂಬ ಕುದುರೆಯನೇರಿ , ಮುಸ್ಸಂಜೆ, ಮೊಗ್ಗಿನಜಡೆ, ಕೂರ್ಮಾವತಾರ, ಬನದ ನೆರಳು, ಗಗ್ಗರಿ, ಶಬರಿ, ನಾಯಿ ನೆರಳು, ಮೌನಿ, ಭಾರತ್ ಸ್ಟೋರ್ಸ್ ಹಾಗೂ ಬೆಟ್ಟದ ಜೀವ'. ಈ ವಿಷಯದ ಬಗ್ಗೆ ಚಂದನ ವಾಹಿನಿಗೆ ಮಿಂಚಂಚೆ ಕಳುಹಿಸಿ ಮಾತನಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಇದು ನಮ್ಮ ಸರ್ಕಾರದ ಹಿಡಿತದಲ್ಲಿರುವ ವಾಹಿನಿಗಳ ನಿಷ್ಕ್ರಿಯತೆಯನ್ನು ತೋರುತ್ತದೆ. ಇನ್ನಾದರೂ ಎಚ್ಚೆತ್ತುಕೊಂಡು ಹೊಸ ಸಿನಿಮಾಗಳನ್ನಾದರೂ ಹಾಕಲಿ ಅಥವ ಬೇರೆ ಇನ್ನಾವುದಾದರೂ ಒಳ್ಳೆಯ ಕಾರ್ಯಕ್ರಮಗಳನ್ನು ಕೊಡಲಿ. ಇಲ್ಲದಿದ್ದರೆ ಖಂಡಿತವಾಗಿಯೂ ಚಂದನ ವಾಹಿನಿ ವೀಕ್ಷಕರನ್ನು ಕಳೆದುಕೊಳ್ಳುವುದರಲ್ಲಿ ಸಂಶಯವಿಲ್ಲ.

ಮಲ್ಲಿಕಾರ್ಜುನ ಎಂ.

## ಅಮೋಘ ನಟಿ

ಕಲರ್ಸ್ ಸೂಪರ್ ವಾಹಿನಿಯಲ್ಲಿ ಪ್ರಸಾರವಾಗುವ 'ಬಂಗಾರಿ' ಧಾರಾವಾಹಿ ಅದ್ಭುತವಾಗಿ ಮೂಡಿಬರುತ್ತಿದೆ. ಮುಗ್ಧ ಮಗು 'ಬಂಗಾರಿ' ಪಾತ್ರಧಾರಿ ಮತ್ತು ಕಾವೇರಿಯ ನಟನೆ ಮನಸ್ಸಿಗೆ ಮುದ ನೀಡುತ್ತಿದೆ. ಈ ಹಿಂದೆ 'ನೀನಿರಲು ಜೊತೆಯಲ್ಲಿ' ಧಾರಾವಾಹಿಯಲ್ಲಿಯೂ ಕಾವೇರಿ ಇದೇ ರೀತಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಅವರ ಅಭಿನಯ, ನನ್ನ ಹಾಗೂ ನನ್ನ ಮನೆಯವರಿಗೂ ಇಷ್ಟ. ಅವರಿಗೆ ಒಳ್ಳೆಯ ಹೆಸರು ತಂದುಕೊಡಲಿ ಎನ್ನುವುದು ನಮ್ಮ ಆಶಯ.

ಸವಿತಾ, ಉಜಿರೆ

## ಅತ್ಯಮೋಘ–ಡ್ರಾಮಾ ಜೂನಿಯರ್ಸ್

ಝೀ ಟಿವಿಯ ವಿಶಿಷ್ಟ ಕಾರ್ಯಕ್ರಮ 'ಡ್ರಾಮಾ ಜೂನಿಯರ್ಸ್'. ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಹನ್ನೊಂದು ಪುಟಾಣಿಗಳು 4 ವರ್ಷದಿಂದ 12ರ ವಯೋಮಿತಿಯವರಾಗಿದ್ದು ಆ ಕಾರ್ಯಕ್ರಮಗಳನ್ನು ವೀಕ್ಷಿಸಿದವರು ಪುಟಾಣಿಗಳ ನಟನಾ ವೈಖರಿಗೆ 'ಬಾಪ್ಪರೇ–ಭಳಿರೇ' ಎಂದಿರುವುದು ದಾಖಲೆ.

ಜನಪ್ರಿಯ ಟಿವಿ ನಟ, ನಿರ್ದೇಶಕ ಸೀತಾರಾಂ, ನಟಿ ಲಕ್ಷ್ಮಿ ಹಾಗೂ ನಟ ವಿಜಯ ರಾಘವೇಂದ್ರರು ಆ ಪುಟಾಣಿಗಳ ವಾಗ್ಝರಿಗೆ ಹಾಗೂ ನೈಜ ನಟನೆಗೆ ಬೆರಗಾಗಿದ್ದು, 'ಹೀಗೂ ಉಂಟೇ' ಎಂದು ವೀಕ್ಷಕರು ಭಾವಿಸಿರುವುದು ಆ ಪುಟಾಣಿಗಳಿಗೆ ಸಿಕ್ಕ ನಿಜವಾದ ಪ್ರಶಸ್ತಿ. 'ರಿಂಗ್ ಮಾಸ್ಟರ್' ಆಗಿ ಆನಂದ್ ನಿರ್ವಹಣೆ ಅಭೂತಪೂರ್ವ.

ಪೌರಾಣಿಕ ಇರಲಿ, ಸಾಮಾಜಿಕ ಇರಲಿ, ಮಕ್ಕಳ ಲೋಕದ ಕಥೆಯೇ ಇರಲಿ, ಒಬ್ಬರಿಗಿಂತ ಒಬ್ಬರು ಮಿಗಿಲೆನಿಸುವಂತೆ ನಟಿಸಿ ವೀಕ್ಷಕರನ್ನು ಸೆರೆಹಿಡಿದಿರುವುದು 'ಡ್ರಾಮಾ ಜೀನಿಯಸ್' ಆಗಿ ವೀಕ್ಷಕರ ಮನಸೂರೆಗೊಂಡಿದೆ.

ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

## ಸಿನಿಮಾ ಪರಿಚಯ

ಮಜಾ ಟಾಕೀಸ್ ಕಾರ್ಯಕ್ರಮದ ಬಗ್ಗೆ ಏನೇ ಟೀಕೆ ಟಿಪ್ಪಣಿಗಳಿದ್ದರೂ ಅದು ಒಂದು ಉತ್ತಮವಾದ ಕಾರ್ಯವನ್ನು ಮಾಡುತ್ತಿದೆ. ಅದೇನೆಂದರೆ ಕನ್ನಡದಲ್ಲಿ ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ಚಲನಚಿತ್ರಗಳನ್ನು ಮಜಾ ಟಾಕೀಸಿನ ಮೂಲಕ ಕನ್ನಡಿಗರಿಗೆ ಪರಿಚಯಿಸುತ್ತಿರುವುದಲ್ಲದೆ, ಕನ್ನಡ ಚಲನಚಿತ್ರಗಳನ್ನು ಥಿಯೇಟರಿಗೆ ಹೋಗಿ ನೋಡಿ ಕನ್ನಡ ಚಿತ್ರಗಳ ಪೈರಸಿಯನ್ನು ತಪ್ಪಿಸಿ ಎಂದು ಪ್ರೇಕ್ಷಕರಲ್ಲಿ ವಿನಂತಿ ಮಾಡಿಕೊಳ್ಳುತ್ತಿರುವುದು.

ಪ್ರತಿಬಾರಿ ಒಂದು ಹೊಸ ಚಿತ್ರತಂಡವನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಅವರೊಂದಿಗೆ ಸಂವಾದ ನಡೆಸುತ್ತ ಆ ಚಿತ್ರದ ವಿವರಗಳನ್ನು ವೀಕ್ಷಕರಿಗೆ ತಿಳಿಸಿಕೊಡಲಾಗುತ್ತದೆ. ಇದರಿಂದ ಆರ್ಥಿಕವಾಗಿ ಅಷ್ಟು ಸದೃಢವಾಗಿಲ್ಲದ, ಚಿತ್ರ ನಿರ್ಮಾಣಕ್ಕೆ ಹೊಸದಾಗಿ ಕೈಹಾಕಿರುವ ನಿರ್ಮಾಪಕರಿಗೆ ಇದು ಬಲವನ್ನು ನೀಡುತ್ತಿದೆ. ಹೊಸ ಹೊಸ ನಿರ್ಮಾಪಕರ, ನಿರ್ದೇಶಕರ, ಕಲಾವಿದರ ಪರಿಚಯ ಎಲ್ಲ ಕನ್ನಡಿಗರಿಗೆ ಆಗುತ್ತದೆ. ಮಜಾ ಟಾಕೀಸ್ ಬರೀ ಮನೋರಂಜನೆ ನೀಡುವ ಕಾರ್ಯಕ್ರಮವಷ್ಟೇ ಆಗಿರದೆ ಕನ್ನಡ ಪರ ಕಾರ್ಯಕ್ರಮವೂ ಆಗಿದೆ.

–ಮುರಲೀಧರ ಕುಲಕರ್ಣಿ, ಬೀದರ್

## ಅ–ಹ ಕಾರಗಳ ಹಾಹಾಕಾರ

ಹರ ಹರ ಮಹಾದೇವ ಧಾರಾವಾಹಿಗೆ ಹಿಂದಿಯ ಪ್ರೇರಣೆ ಇದ್ದರೂ, ಸಂಭಾಷಣೆಗಳಲ್ಲಿ ಕನ್ನಡ ಭಾಷೆಯ ಸತ್ವವಿಲ್ಲ. ಎಲ್ಲರೂ ಅಸಹಜ ಕನ್ನಡವನ್ನೇ ಬಳಸುತ್ತಾರೆ. ಅಲ್ಲದೇ ಮಹಾದೇವನು ಕೂಡ, ಸತಿಗೆ– 'ನಿನ್ನನ್ನು ಎದುರಿಸುವುದಕ್ಕೆ... ಬದಲಾಗಿ ನಿನ್ನನ್ನು ಹೆದರಿಸುವುದಕ್ಕೆ' ಅನ್ನುತ್ತಾನೆ. ಅಲ್ಪಪ್ರಾಣ–ಮಹಾಪ್ರಾಣಗಳ ಪ್ರಾಣವನ್ನೇ ಹಿಂಡುತ್ತಿದ್ದಾನೆ ಮಹಾಯೋಗಿ ಮಹಾದೇವ. ಇದು ಅಕ್ಷಮ್ಯ. ಅ–ಹ ಕಾರಗಳ ಹಾಹಾಕಾರ ಬೇರೆ.

–ಶಶಿಕಲಾ ವಸ್ತ್ರದ, ಹುಬ್ಬಳ್ಳಿ

## ಚಂದನವೇ ಚಂದ

ಚಂದನ ವಾಹಿನಿ ಉತ್ತಮವಾಗಿ ಬರುತ್ತದೆ. ಎಲ್ಲ ಕಾರ್ಯಕ್ರಮಗಳೂ ಉತ್ತಮವಾಗಿವೆ. ಪ್ರತಿಯೊಂದು ಕಾರ್ಯಕ್ರಮ ಪ್ರತಿಯೊಬ್ಬರಿಗೆ ಉಪಯೋಗವಾಗುವಂತಹುದು.

ಅದರಲ್ಲೂ ಡಾ. ನಾ. ಸೋಮೇಶ್ವರರು ನಡೆಸಿಕೊಡುವ ಥಟ್ಟಂತೆ ಹೇಳಿ ಹಾಗೂ ಮಧುರ ಮಧುರವೀ ಮಂಜುಳಗಾನ ಚೆನ್ನಾಗಿವೆ. ಮಂಜುಳಗಾನ ಕೇಳುತ್ತ, ಕೇಳುತ್ತ ನಿದ್ರೆಗೆ ಜಾರಿಬಿಡುತ್ತೇವೆ. ಮಲಗುವಾಗ ಕೊಲೆ, ದುಷ್ಟತನ, ಮನೆ ಒಡೆಯುವುದು ಇಂತಹ ಕಾರ್ಯಕ್ರಮ ನೋಡುವುದಕ್ಕಿಂತ ಮಂಜುಳಗಾನ ಕೇಳುತ್ತ ನಿದ್ರೆ ಮಾಡುವುದು ಒಳ್ಳೆಯದಲ್ಲವೇ?

–ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ